# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: | 756 |
| ಸದಸ್ಯರ ಹೆಸರು | :: | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | :: | 21.02.2024 |
| ಉತ್ತರಿಸುವ ಸಚಿವರು | :: | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಒತ್ತುವರಿಯಾಗಿರುವ ಗೋಮಾಳ ಜಮೀನುಗಳ ಸಂಖ್ಯೆ ಎಷ್ಟು; ಒತ್ತುವರಿಯಾದ ಗೋಮಾಳ ಜಮೀನುಗಳನ್ನು ಹಿಂಪಡೆಯಲಾಗಿದೆಯೇ; ಹಾಗೂ ಒತ್ತುವರಿದಾರರ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ; | **ಯಾದಗಿರಿ** ಜಿಲ್ಲೆಯಲ್ಲಿ ಒಟ್ಟು 168 ಗೋಮಾಳ ಜಮೀನುಗಳು ಮತ್ತು **ಕಲಬುರಗಿ** ಜಿಲ್ಲೆಯಲ್ಲಿ ಒಟ್ಟು 524 ಗೋಮಾಳ ಜಮೀನುಗಳು ಒತ್ತುವರಿಯಾಗಿರುತ್ತವೆ.<br><br>ಒತ್ತುವರಿಯಾದ ಗೋಮಾಳ ಜಮೀನುಗಳನ್ನು ಹಿಂಪಡೆಯುವ ಕಾರ್ಯ ಪ್ರಗತಿಯಲ್ಲಿರುತ್ತದೆ. ನಮೂನೆ-57ರಡಿ ಅರ್ಜಿ ಸಲ್ಲಿಸಿ ತಿರಸ್ಕೃತಗೊಂಡ ಪ್ರಕರಣಗಳು ಸಾಕಷ್ಟು ಪ್ರಮಾಣದಲ್ಲಿದ್ದು, ಅತಿಕ್ರಮಣದಾರರಿಗೆ ನೋಟೀಸ್ ಜಾರಿ ಮಾಡಿ ಸದರಿ ಒತ್ತುವರಿ ಜಾಗವನ್ನು ಹಿಂಪಡೆಯಲಾಗುತ್ತಿದೆ. ಸಾಗುವಳಿ ಉದ್ದೇಶಕ್ಕಾಗಿ ಅತಿಕ್ರಮಣ ಮಾಡಿಕೊಂಡಿದ್ದು, ಸದರಿ ಅತಿಕ್ರಮಣದಲ್ಲಿ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ, ಬೆಂಗಳೂರು ಇವರು ಒತ್ತುವರಿಯಾಗಿರುವ ಸರ್ಕಾರಿ ಜಮೀನನ್ನು ತೆರವುಗೊಳಿಸಲು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದ್ದು, ಅದರಂತೆ ಒತ್ತುವರಿಯಾದ ಜಮೀನನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ) | ಸದರಿ ಜಿಲ್ಲೆಗಳಲ್ಲಿ ತಾಲ್ಲೂಕು ಕಚೇರಿಯಲ್ಲಿ ರೈತರ ಆರ್.ಟಿ.ಸಿ ಯಲ್ಲಿ ಬೆಳೆ ನೋಂದಾವಣಿ, ಪಹಣಿ ನೋಂದಾವಣೆ ಮುಂತಾದ ಕಾರ್ಯಗಳು ಸುಸೂತ್ರವಾಗಿ ನಡೆಯದೆ ಇರುವ ಬಗ್ಗೆ ದೂರುಗಳು ಕೇಳಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು) | ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಇಂತಹ ಯಾವುದೇ ದೂರು ಪ್ರಕರಣಗಳು ದಾಖಲಾಗಿರುವುದಿಲ್ಲ. |

-2-

| | | |
|---|---|---|
| **ಇ)** | ತಾಲ್ಲೂಕು ಕೇಂದ್ರಗಳ ವ್ಯಾಪ್ತಿಯಲ್ಲಿ ಜಮೀನುಗಳ ಸರ್ವೆ ಕಾರ್ಯ ನಡೆಯದೆ ಇರುವುದರಿಂದ ಸರ್ವೆಯರ್ ನೇಮಕಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ? (ವಿವರ ನೀಡುವುದು) | ಭೂಮಾಪನ ಇಲಾಖೆಯಲ್ಲಿ ಖಾಲಿ ಇರುವ ಭೂಮಾಪಕರ ಹುದ್ದೆಗಳ ಪೈಕಿ 264 ಉಳಿಕೆ ಮೂಲ ವೃಂದದ ಮತ್ತು 100 ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಒಟ್ಟು 364 ಭೂಮಾಪಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಸರ್ಕಾರವು ತೀರ್ಮಾನಿಸಿದೆ. ಈ ಹುದ್ದೆಗಳನ್ನು ಅಂಗವಿಕಲ ಮೀಸಲಾತಿಯನ್ನು ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಯ್ಕೆ ಪಟ್ಟಿ ನೀಡಿದ ನಂತರ ನಿಯಮಗಳಂತೆ ಕ್ರಮವಹಿಸಲಾಗುತ್ತದೆ.<br><br>2023ನೇ ಸಾಲಿನಲ್ಲಿ 2000 ಪರವಾನಗಿ ಭೂಮಾಪಕರುಗಳ ಆಯ್ಕೆ ಸಂಬಂಧ ಅಧಿಸೂಚನೆ ಹೊರಡಿಸಲಾಗಿದ್ದು, 1405 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. ಈ ಪೈಕಿ ಉತ್ತೀರ್ಣರಾದ 991 ಅಭ್ಯರ್ಥಿಗಳಿಗೆ ದಿನಾಂಕ:06.02.2024 ಮತ್ತು 07.02.2024 ರಂದು ಕೌನ್ಸಲಿಂಗ್ ನಡೆಸಿದ್ದು, ತಾಲ್ಲೂಕುವಾರು 991 ಪರವಾನಗಿ ಭೂಮಾಪಕರಿಗೆ ಸ್ಥಳ ನಿಯುಕ್ತಿಗೊಳಿಸಲು ಕ್ರಮವಹಿಸಲಾಗುತ್ತಿದೆ. |

**ಆರ್‌ಡಿ 16 ಎಲ್‌ಜಿಜಿ 2024**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು